‘‘ಹೊರಗೊಬ್ಬ ಹುಡುಗ ಕೂತಿದ್ದಾನೆ. ಪ್ಯಾಂಟ್ರಿಮ್ಯಾನ್ ನೌಕರಿಗೆ ಅರ್ಜಿ ಹಾಕಿದ್ದಾನೆ... ಇಂಟರ್ವ್ಯೂ ಮಾಡು. ಕೆಲಸ ಗೊತ್ತಿದೆಯಾ, ಕ್ಲೀನ್ ಇದ್ದಾನಾ ನೋಡಿ, ಓಕೆ ಹಾಕಿ ಫೈಲ್ ಇಲ್ಲಿ ಕಳಿಸು'' ಇಂಟರ್ಕಾಮಿನಲ್ಲಿ ಹೇಳಿದರು ಮ್ಯಾನೇಜರ್.

ಅವರ ಮಾತಿನ ಧಾಟಿಯಲ್ಲಿ ಬರೇ ಓಕೆ ಎನ್ನುವುದಷ್ಟೆ ನನ್ನ ಕೆಲಸ ಎಂದು ನನಗೆ ತಿಳಿದುಹೋಗಿತ್ತು. ಆಫೀಸಿಗೆ ಬರುವ ಅತಿಥಿಗಳಿಗೆ ಮತ್ತು ಸ್ವಂತ ನೌಕರರಿಗೆ ಚಹಾ ಕೊಡುವುದಕ್ಕೆ ಒಬ್ಬ ಹುಡುಗ ಬೇಕಿತ್ತು. ಬರಲಿ, ಯಾರಾದರೇನು? ಮ್ಯಾನೇಜರರ ಆಣತಿಯಂತೆ, ನಾನು ಮಾಡುತ್ತಿದ್ದ ಕೆಲಸವನ್ನು ಬದಿಗಿಟ್ಟು ಆ ಹುಡುಗನನ್ನು ಒಳಗೆ ಕರೆಸಿದೆ.

ಬಲಗೈಯಲ್ಲಿ ಪದೇಪದೆ ಸಲಾಂ ಹೊಡೆಯುತ್ತ ಹುಡುಗ ಕ್ಯಾಬಿನ್ನಿನೊಳಗೆ ಬಂದ.

‘‘ಏನು ಹೆಸರು?'' ಕೇಳಿದೆ ನಾನು.

‘‘ಭೀಮ್ ಸೇನ್ ಮಹಾರಾಜ್...'' ಎಂದ.

‘‘ಅರೆ ವಾಹ್, ಪ್ಯಾಂಟ್ರಿಯ ನೌಕರಿಗೆ ಈ ಹೆಸರು ಅಡ್ಡಿಯಿಲ್ಲ'' ಎಂದೆ ನಾನು ನಗುತ್ತ. ಆತನೂ ನಕ್ಕ.

‘‘ಇದಕ್ಕೆ ಮೊದಲು ಎಲ್ಲಿ, ಏನು ನೌಕರಿ ಮಾಡಿದ್ದೀ?'' ಕೇಳಿದೆ ನಾನು.

‘‘ಸ್ಟಾರ್ ಹೋಟೆಲಿನಲ್ಲಿ ರೂಮ್ ಸರ್ವಿಸ್‌ನಲ್ಲಿದ್ದೆ'' ಅಂದ.

‘‘ಮತ್ಯಾಕೆ ಬಿಟ್ಟೆ?''

‘‘ಅಲ್ಲಿಯ ಮ್ಯಾನೇಜರರ ಪರಿಚಯದವನೊಬ್ಬ ಬಂದ, ನನ್ನನ್ನು ಬಿಟ್ಟು ಅವನನ್ನು ಸೇರಿಸಿಕೊಂಡರು'' ಅಂದ.

ಯಾವುದೇ ದೇಶವಿರಲಿ, ಯಾವುದೇ ಸರಕಾರ ಇರಲಿ, ಯಾವುದೇ ಕಾನೂನು ತರಲಿ, ಬಲಹೀನರ ಶೋಷಣೆ ಮುಂದುವರೆಯುತ್ತಲೇ ಇರುತ್ತದೆ. ಖಾಲಿಹುದ್ದೆಗೆ ನೇಮಕಾತಿ ನಡೆಯುವಾಗ ಒಳಗಿನ ಬಲಶಾಲಿಗಳು ಪ್ರಭಾವ ಬೀರಿ ತಮ್ಮವರನ್ನು ಸೇರಿಸಿಕೊಳ್ಳಲಿ ಬಿಡಿ. ಆದರೆ, ತಮ್ಮ ಅಭ್ಯರ್ಥಿಯನ್ನು ಒಳಗೆ ಸೇರಿಸಲು ನೌಕರಿಯಲ್ಲಿದ್ದ ಇನ್ನೊಬ್ಬನನ್ನು ಹೊರದೂಡುವುದು ಯಾವ ನ್ಯಾಯ? ಇದ್ದಕ್ಕಿದ್ದಂತೆ ಒಂದು ದಿನ ‘ನಾಳೆಯಿಂದ ನೀನು ಕೆಲಸಕ್ಕೆ ಬರಬೇಡ’ ಅಂದರೆ ಯಾರಿಗಾದರೂ ಹೇಗನ್ನಿಸೀತು. ಈ ಹುಡುಗನ ಬಗ್ಗೆ ಪಾಪ ಎನಿಸಿತು ನನಗೆ.

ಇನ್ನೂ ಕೈ ಕಟ್ಟಿ ನಿಂತಿದ್ದ ಅವನನ್ನು ಮತ್ತೆ ಪ್ರಶ್ನಿಸಲು ಆರಂಭಿಸಿದೆ.

‘‘ಇಂಗ್ಲಿಷ್ ಬರುತ್ತಾ?''

‘‘ತಕ್ಕ ಮಟ್ಟಿಗೆ ಬರುತ್ತೆ.''

‘‘ಅರೆಬಿಕ್ ಬರುತ್ತಾ?''

‘‘ತಕ್ಕಮಟ್ಟಿಗೆ ಸುಧಾರಿಸುತ್ತೇನೆ.''

‘‘ಹಿಂದಿ ಬರುತ್ತಾ?''

‘‘ಬರುತ್ತೆ ಸಾರ್'' ಅಂದ.

‘‘ಯಾರಿಗಾದ್ರೂ ಬಯ್ಯಬೇಕಾದ್ರೆ ಯಾವ ಭಾಷೆಯಲ್ಲಿ ಬೈಯುತ್ತಿ?'' ಕೇಳಿದೆ ನಾನು.

ನನ್ನ ಪ್ರಶ್ನೆಗೆ ನಕ್ಕ ಆತ. ಸುಲೇಮಾನಿ ಚಹಾ ಅಂದರೆ ಏನು, ಒಂದು ಕಪ್ ಚಹಾಕ್ಕೆ ಸಾಧಾರಣ ಎಷ್ಟು ಸಕ್ಕರೆ ಹಾಕಬೇಕು, ತೊಳೆದ ಚಹಾ ಕಪ್ಪನ್ನು ಯಾಕೆ ಕವುಚಿ ಇಡುತ್ತಾರೆ, ಗಾವಾ ಮಾಡಲು ಯಾವ ಕಾಫಿ ಹುಡಿ ಒಳ್ಳೆಯದು... ಇವನ್ನೆಲ್ಲ ಕೇಳುವುದು ಬಿಟ್ಟು ಇಂಟರ್ವ್ಯೂನಲ್ಲಿ ಯಾವ